‘ನಂಗ್ಯಾಕೆ ಪದೇ ಪದೇ ಕೆಣಕ್ತೀಯೋ ಸಾಬಿ? ಕತ್ತೆಹಾಲು ಕುಡುದ್ರೆ ಬುದ್ಧಿ ಬೆಳೀತದೆ ಅಂತ ಗೊತ್ತಿಲ್ಲೇನು! ನಿಂಗೂ ಕುಡಿಸಿದ್ನಲ್ಲೋ... ನಿಮ್ಮವ್ವಂಗೆ ಕೇಳಿನೋಡೋ ಹೇಳ್ತಾಳೆ...’ ಶಿಶುಗಳಿಗೆ ಕತ್ತೆಹಾಲು ಕುಡಿಸುತ್ತಲೇ ನನ್ನ ‘ಶಿಶುಕಾಲ’ ಕೆಣಕಿದ್ದಳು. ಕತ್ತೆಹಾಲು ಕುಡಿಸುವ ಹಿಂದಿನ ಸತ್ಯಗಳು ಮತ್ತು ಮೂಢನಂಬಿಕೆಗಳು ಲಾಟುಗಟ್ಟಲೆ ಬಿದ್ದಿವೆ. ಬುದ್ಧಿ ಚುರುಕಿನ ಜೊತೆ ಧ್ವನಿಯೂ ಸುಮಧುರವಾಗುತ್ತಂತೆ! ಯಾವುದಾದರೂ ಕತ್ತೆ ಸುಮಧುರವಾಗಿ ಸದ್ದುಮಾಡಿ ಬಾಯಿ ತೆರೆದಿದ್ದನ್ನು ನಾನಂತೂ ನೋಡಲೇ ಇಲ್ಲ! ಹಾಡುಗಳನ್ನು ಹಾಡಿ ಖ್ಯಾತರಾದ ಹಾಡುಗಾರರ್‍ಯಾರೂ ತಮ್ಮ ಕಂಠಸಿರಿಗೆ ಕತ್ತೆಹಾಲೇ ಕಾರಣ ಅಂತ ಹೇಳಿಕೊಂಡಿದ್ದನ್ನು ನಾನು ಕತ್ತೆಹಾಲಾಣೆಗೂ ಕೇಳಿಲ್ಲ. ಕಫಕ್ಕೆ ಕತ್ತೆಹಾಲು ರಾಮಬಾಣವಂತೆ. ಲಿವರ್‌ನ ಸಮಸ್ಯೆಗಳಿಗೂ ಕತ್ತೆಹಾಲು ಔಷಧಿಯಂತೆ.

ಕತ್ತೆಸೌದೆಯ ನಾಗಿ ಕತ್ತೆಹಾಲು ಕುಡಿಸಿ ಏನೇನೋ ಹೇಳುತ್ತಾ ನಂಬಿಸುತ್ತಿರುವುದನ್ನು, ಆ ನಂಬಿಕೆಗೆ ತಮ್ಮ ತಮ್ಮ ನವಜಾತ ಶಿಶುಗಳನ್ನು ಬಲಿಕೊಡುತ್ತಿರುವ ತಂದೆ–ತಾಯಂದಿರನ್ನು ನೋಡಿ, ಅಯ್ಯೋ ಪಾಪ ಅನಿಸುವಂತಿತ್ತು. ಈ ಕತ್ತೆಹಾಲಿನ ಕುಡಿಸುವಿಕೆಗೆ ಸಂಬಂಧಿಸಿದಂತೆ ಅದೇಕೋ ಸಣ್ಣ ಸಂಶೋಧನೆ ಮಾಡಬೇಕೆನಿಸಿತು. ಆ ಪ್ರಯತ್ನಕ್ಕೆ ದಕ್ಕಿದ ಒಂದಿಷ್ಟು ವರದಿಗಳು ಆತಂಕಕಾರಿಯಾಗಿದ್ದವು. ಒಂದು ರಾಷ್ಟ್ರಮಟ್ಟದ ಇಂಗ್ಲಿಷ್ ಪತ್ರಿಕೆಯಲ್ಲಿ ನವಜಾತ ಶಿಶುಗಳಿಗೆ ಕತ್ತೆಹಾಲುಣಿಸುವ, ಆ ನಂತರ ಆ ಮಕ್ಕಳು ಸಾವು ಕಾಣುವ ವಿವರಗಳಿದ್ದವು. ತಮಿಳುನಾಡು ಮತ್ತು ಪಾಂಡಿಚೇರಿಯಲ್ಲಿ ಈ ಘಟನೆಗಳು ದಾಖಲಾಗಿದ್ದವು. ಹೆಣ್ಣುಮಗುವೊಂದು ಜನ್ಮಿಸಿದ ಕೂಡಲೇ ಆ ಮಗುವಿಗೆ ಅಜ್ಜಿ ಮೊದಲು ಮಾಡಿದ ಕೆಲಸ, ಕತ್ತೆಹಾಲನ್ನು ತಂದುಕುಡಿಸಿದ್ದಂತೆ. ಆರೋಗ್ಯಯುತವಾಗಿಯೇ ಇದ್ದ ಆ ಮಗು ಬುದ್ಧಿ ಬೆಳೆಯುವ ಮೊದಲೇ ಸಾವುಕಂಡಿತ್ತು. ಮತ್ತೊಂದು ಗಂಡುಮಗು ಸುಲಭ ಹೆರಿಗೆಯ ಮೂಲಕವೇ ಹುಟ್ಟಿತ್ತು. ಹುಟ್ಟಿದಾಗ ಬರೋಬ್ಬರಿ 2.6 ಕೆ.ಜಿ. ಇತ್ತು. ಹುಟ್ಟಿದ ಅರ್ಧಗಂಟೆಯೊಳಗೆ ಆ ಮಗೂಗೆ ತಾಯಿಯ ಹಾಲು ಬೇಕಿತ್ತು. ಆದರೆ, ಅದನ್ನು ಮಾಡದೇ ದುಪ್ಪಟ್ಟು ಹಣ ನೀಡಿ ಆ ಮಗುವಿನ ಕಡೆಯವರು ಕತ್ತೆಹಾಲು ತಂದು ಮಗುವಿಗೆ ಕುಡಿಸಿಬಿಟ್ಟಿದ್ದರಂತೆ. ಮಾರನೇ ದಿನ ಆರೋಗ್ಯದಿಂದಿದ್ದ ಮಗು ಉಸಿರಾಟದ ತೊಂದರೆಯಿಂದ ಅಸುನೀಗಿತಂತೆ. ಈ ಸತ್ಯಗಳನ್ನೆಲ್ಲ ನಾಗಿಗೆ ಹೇಳುವುದಾದರೂ ಹೇಗೆಂದು ಯೋಚಿಸತೊಡಗಿದೆ. ತಲೆಕೆರೆದುಕೊಂಡು ಯೋಚಿಸಿದ್ದಷ್ಟೇ ಬಂತು. ಅವತ್ತು ಏನೂ ಅನಾಹುತವಾಗಲಿಲ್ಲ ಎಂಬುದು ಕಡಿಮೆ ಪವಾಡವೇನಾಗಿರಲಿಲ್ಲ. ಚೂರು ಹೆಚ್ಚೂಕಮ್ಮಿಯಾಗಿದ್ದರೂ ಕೆರೆ ಅಂಗಳದ ನವಜಾತ ಶಿಶುಗಳೆಲ್ಲ ಸಾಲು ಸಾಲಾಗಿಯೇ ಸಾವಿನ ಕುಣಿತಕ್ಕೆ ಸಿಗೇಬೀಳುತ್ತಿದ್ದವು. ಈ ಕತ್ತೆಹಾಲಿನ ಅನುಕೂಲ ಮತ್ತು ಅನನುಕೂಲಗಳ ಬಗ್ಗೆ ಅದೇಕೆ ಯಾರೂ ಕೊನೆಯ ಪಕ್ಷ ಆರೋಗ್ಯ ಇಲಾಖೆಯ ಜನರು ಜಾಗೃತಿಯಂಥ ಕೆಲಸಗಳನ್ನು ಮಾಡುತ್ತಿಲ್ಲವೋ?

ಕತ್ತೆ ಜೊತೆಗಿನ ಬಾಲ್ಯದ ಸುಮಧುರ ನೆನಪುಗಳು ಇವತ್ತು ಹೆಚ್ಚಾಗಿಯೇ ಬಿಚ್ಚಿಕೊಂಡವು. ನಮಗೆಲ್ಲ ತೀರಾ ಚಿರಪರಿಚಿತ ಪ್ರಾಣಿಗಳೆಂದರೆ ನಾಗಿಯ ಕತ್ತೆಗಳೇ ಆಗಿದ್ದವು. ನಾವು ಮೂರ್‍ನಾಲ್ಕು ಜನ ಹುಡುಗರು ತೀರಾ ಆಪ್ತರಾಗಿದ್ದೆವು. ನಮ್ಮಲ್ಲಿ ಒಂದಿಷ್ಟು ಕೀಟಲೆ ಸ್ವಭಾವದವನು ಮಂಜ. ನಾವು ‘ಬೆಕ್ಕಿನ ಕೊರಳಿಗೆ ಗಂಟೆ ಕಟ್ಟೋರ್‍ಯಾರು?’ ಅಂತ ಹೇಳಿಕೊಳ್ತಿರ್ತೇವೆ. ಅದ್ಯಾರು ಬೆಕ್ಕಿಗೆ ಗಂಟೆ ಕಟ್ಟಿದರೋ ಬಿಟ್ಟಿದರೋ ಗೊತ್ತಿಲ್ಲ. ಆದರೆ, ನಮ್ಮ ಮಂಜ ಕತ್ತೆ ಬಾಲಕ್ಕೆ ತಗಡಿನ ಸೀಮೆಣ್ಣೆ ಡಬ್ಬ ಕಟ್ಟಿ ಕೆರೆ ಅಂಗಳದ ತುಂಬಾ ಓಡಾಡಿಸಿ ಜನರ ನೆಮ್ಮದಿಯನ್ನೇ ಹಾಳುಮಾಡಿದ್ದ. ಅವತ್ತು ಸೌದೆ ತಂದಿಳಿಸಿದ ಕತ್ತೆಗಳನ್ನು ಓಡಾಡಿಕೊಂಡಿರಲು ಸ್ವತಂತ್ರವಾಗಿ ಬಿಟ್ಟಿದ್ದಳು ನಾಗಿ. ಸೌದೆ ಮಾರಾದ ಮೇಲೆ ಒಂದಿಷ್ಟು ಉಂಡು ಹೆಬ್ಬಾವು ಮಲಗಿದಂತೆ ಬಿದ್ದುಕೊಂಡಿದ್ದಳು. ನಾಗಿಯ ಒಂದು ಕತ್ತೆ ನಾವು ಗೋಲಿ ಆಡುವ ಜಾಗಕ್ಕೆ ಬಂದು ಅಲ್ಲೇ ಕೈಕಾಲು ಚೆಲ್ಲಿ ಮಲಗಲು ಪ್ರಯತ್ನಿಸುತ್ತಿತ್ತು. ಮಂಜನಿಗೆ ಅದೇನನಿಸಿತೋ ಗೋಲಿ ಆಟ ನಿಲ್ಲಿಸಿ ಮನೆಗೋಡಿ ಹೋಗಿ ತಗಡಿನ ಡಬ್ಬ ತಂದಿದ್ದ.

ಕತ್ತೆಯೆಂಬ ಪ್ರಾಣಿಯನ್ನು ‘ನಾಗಿ’ ಎಂಬ ವ್ಯಕ್ತಿತ್ವದ ಮೂಲಕ ಕಾಣುವ ‘ನಾಗಿ ಮತ್ತವಳ ಕತ್ತೆ’ ಎಂಬ ಪ್ರಬಂಧ ತನ್ನ ವಸ್ತು ವಿಶೇಷ ಮತ್ತು ಕಾಳಜಿಪೂರಿತ ನಿರ್ವಹಣೆಯಿಂದ ಗಮನ ಸೆಳೆಯುತ್ತದೆ.

– ಜಿ.ಕೆ. ರವೀಂದ್ರಕುಮಾರ್
ಪ್ರಬಂಧ ಸ್ಪರ್ಧೆ ತೀರ್ಪುಗಾರರು

ಮಲಗಿದ್ದ ಕತ್ತೆಗೆಬ್ಬಿಸಿ ಅದರ ಬಾಲಕ್ಕೆ ಡಬ್ಬ ಕಟ್ಟಲು ಪ್ರಯತ್ನಿಸುವುದಕ್ಕೂ ಆ ಕತ್ತೆ ಜಾಸ್ತಿ ಜಾಸ್ತಿ ಒದೆಯಲು ಆರಂಭಿಸಿತ್ತು. ಆ ಒದೆಗಳಿಂದ ತಪ್ಪಿಸಿ ತಪ್ಪಿಸಿಕೊಂಡೇ ಮಂಜ ಕೊನೆಗೂ ಕತ್ತೆ ಬಾಲಕ್ಕೆ ತಗಡಿನ ಡಬ್ಬ ಕಟ್ಟಿಬಿಟ್ಟಿದ್ದ. ಕತ್ತೆ ಮತ್ತು ತಗಡಿನ ಡಬ್ಬ ಸೇರಿಕೊಂಡರೆ ಊರಿಗೆ ಊರೇ ನೆಮ್ಮದಿ ಕಳೆದುಕೊಳ್ಳುತ್ತೆ ಅನ್ನೋದನ್ನು ಅವತ್ತು ಕಣ್ಣಾರೆ ನೋಡಿಬಿಟ್ಟೆ, ಕಿವಿಯಾರೆ ಕೇಳಿಬಿಟ್ಟೆ. ತಗಡಿನ ಡಬ್ಬ ಸದ್ದುಮಾಡಿದರೆ ಸಾಕು ಕತ್ತೆ ಹುಚ್ಚು ಹಿಡಿದ ಕುದುರೆಯಂತೆ ಎಲ್ಲಿಗೆ ಬೇಕೋ ಅಲ್ಲಿಗೆ, ಎತ್ಲಾಗೆ ಬೇಕೋ ಅತ್ಲಾಗೆ ಓಡಿಬಿಡುತ್ತಿತ್ತು. ಸದ್ದು ನಿಲ್ಲಂಗಿಲ್ಲ, ಕತ್ತೆ ಓಡೋದು ಬಿಡಂಗಿಲ್ಲ! ಅವಾಗ ಈ ಕತ್ತೆ ತಳಿ ಕುದುರೆ ವಂಶಕ್ಕೆ ಸೇರಿದ್ದು ಎಂಬುದು ದಿಟವಾಗಿ ಹೋಯ್ತು... ಆಮೇಲೆ ನಾಗಿಯೂ ಮಂಜನಿಗೆ ಬಿಡದೇ ಒದೆಕೊಟ್ಟಿದ್ದಳು. ಮನುಷ್ಯನಲ್ಲೂ ಕತ್ತೆಗುಣ ಇರುತ್ತೆ ಅಂತ ಝಾಡಿಸಿ ಒದ್ದು ಒದ್ದು ತೋರಿಸಿಕೊಟ್ಟಿದ್ದಳು...

ಇತ್ತಿತ್ತಲಾಗಿ ಇದ್ದಕ್ಕಿದ್ದ ಹಾಗೆ ಕತ್ತೆಗಳು ಕಣ್ಮರೆಯಾಗುತ್ತಿರುವ ವಿಚಾರ ನಾಗಿಗೂ ಗೊತ್ತಾಗಿ ಆತಂಕಕ್ಕೆ ಒಳಗಾಗಿದ್ದಳು. ಊರಲ್ಲೆಲ್ಲ ಅಲ್ಲಲ್ಲಿ ಟ್ರಾಫಿಕ್ ಕಂಟ್ರೋಲರ್‌ಗಳ ಥರಾ ನಿಂತ ಜಾಗದಲ್ಲೇ ನಿಂತು ವಾಹನಗಳ ಅತಿವೇಗಕ್ಕೆ ಕಡಿವಾಣ ಹಾಕುತ್ತಿದ್ದ ಕತ್ತೆಗಳು ಈಗ ಕಾಣೋದು ಅಪರೂಪವಾಗುತ್ತಿವೆ. ಒಗೆದ ಬಟ್ಟೆ, ಮರಳು, ಸೌದೆ ಒಯ್ಯಲು ತನ್ನ ಬೆನ್ನನ್ನು ಸದಾ ಸಿದ್ಧವಾಗಿಟ್ಟುಕೊಳ್ಳುತ್ತಿದ್ದ ಕತ್ತೆಗಳು ಕಣ್ಮರೆಯಾಗುತ್ತಿರುವ ವಿಚಾರ ಕೇವಲ ನಾಗಿಗೆ ಮಾತ್ರ ಆತಂಕ ಮೂಡಿಸಿರಲಿಲ್ಲ. ಸಣ್ಣಪುಟ್ಟ ವ್ಯವಹಾರಗಳನ್ನು ಕತ್ತೆಗಳ ಮೂಲಕವೇ ಮಾಡುತ್ತಿದ್ದ ಒಂದಿಷ್ಟು ಜನ ಕೂಡ ನಿದ್ದೆಕೆಡಿಸಿಕೊಂಡಿದ್ದರು. ವಿಚಾರ ಹೀಗಿರುವಾಗ ಪತ್ರಿಕೆಗಳಲ್ಲಿ, ಟೀವಿಗಳಲ್ಲಿ ಒಂದು ಸುದ್ದಿ ಜೋರುಜೋರಾಗಿಯೇ ಸದ್ದು ಮಾಡುತ್ತಿತ್ತು; ‘ಜಿಂಕೆ ಮಾಂಸವೆಂದು ನಂಬಿಸಿ ಕತ್ತೆಮಾಂಸ ತಿನ್ನಿಸಿದ ತಂಡ!’ ಕಾಡಿನ ಜೊತೆ ಸಂಬಂಧವಿಟ್ಟುಕೊಂಡಿದ್ದ ಒಂದಿಷ್ಟು ಮಂದಿ ಸುಲಭವಾಗಿ ಹಣ ಕಮಾಯಿಸಲು ಕಂಡುಕೊಂಡ ಸುಲಭ ಮಾರ್ಗವೇ ಕತ್ತೆಗಳನ್ನು ಕದ್ದು, ಕತ್ತರಿಸಿ, ಜಿಂಕೆಯ ಮಾಂಸವೆಂದು ಕದ್ದುಮುಚ್ಚಿ ಒಳ್ಳೆ ರೇಟಿಗೆ ಮಾರಾಟ ಮಾಡಿಬಿಡೋದು. ಜಿಂಕೆಯದೇ ಮಾಂಸವೆಂದು ನಂಬಿ ತಿಂದವರ ಪಾಡು ಹೇಗಾಗಿರಬೇಡ! ಮೋಸಗಾರರ ಬಲೆಗೆ ಸಿಕ್ಕಿ ಕತ್ತೆಗಳ ಸಂಖ್ಯೆ ಕಡಿಮೆಯಾಯ್ತಾ? ಈಗಿನ ಮಕ್ಕಳಿಗೆ ಕತ್ತೆಗೆ ಡಬ್ಬ ಕಟ್ಟಲು, ಪಟಾಕಿ ಕಟ್ಟಿ ಸಿಡಿಸಲು ಬರುತ್ತಾ? ಆ ಕಾಲವೆಲ್ಲ ಮುಗಿದೇ ಹೋಯಿತಾ? ಕತ್ತೆಗಳ ಕುರಿತಂತೆಯೂ ಸಾವಿರ ಪ್ರಶ್ನೆಗಳನ್ನು ಮೂಡಿಸುವ ಕಾಲ ಬಂದಿದೆಯಾ? ನಾವು ಹುಲಿ,ಸಿಂಹ,ಆನೆಗಳ ಬಗ್ಗೆಯೇ ತಲೆಕೆಡಿಸಿಕೊಳ್ಳುತ್ತಾ ಬಂದಿದ್ದೇವೆ.ಈ ಪ್ರಾಣಿಗಳ ಸಂತತಿ ಹೆಚ್ಚಿಸುವ ಪ್ರಯತ್ನ ಮಾಡಿ ಯಶಸ್ಸನ್ನೂ ಕಂಡಿದ್ದೇವೆ. ಆದರೆ, ಕತ್ತೆಗಳ ಬಗ್ಗೆ, ಅವುಗಳ ಸಂತತಿಯ ಬಗ್ಗೆ ಎಲ್ಲಿತಾನೇ ಈವರೆಗೆ ಮಾತಾಡಿದ್ದೇವೆ. ಹುಲಿ, ಸಿಂಹದಂತೆಯೇ ಕತ್ತೆಯದೂ ಒಂದು ಜೀವವಲ್ಲವೇ? ಅದರ ಸಂತತಿ ನಿರ್ನಾಮದ ಹಾದಿಯಲ್ಲಿದ್ದರೂ ನಮಗೇಕೆ ಅದು ಮುಖ್ಯವಾಗಿ ಕಾಣುತ್ತಿಲ್ಲವೋ?

25–30 ವರ್ಷ ಕಾಲದ ಆಯುಸ್ಸನ್ನಿಟ್ಟುಕೊಂಡು ಜನ್ಮತಾಳುವ ಕತ್ತೆಗೆ ‘ಕಾಯಕವೇ ಕೈಲಾಸ’ದ ಜೀವನ. ಕತ್ತೆಯಂತಹ ಜೀವಿಯನ್ನು ಸಾಕುತ್ತಿದ್ದ ನಾಗಿಯಂಥವರು ತೀರಾ ಕಡಿಮೆಯಾಗಿದ್ದಾರೆ. ಕತ್ತೆಯನ್ನು ಪ್ರತಿಭಟನೆಗೆ ಆಗಾಗ ಎಳೆದುತರುವ ಕನ್ನಡ ಚಳವಳಿಕಾರರು ಆ ಕತ್ತೆಯ ನಿಜವಾದ ಕಷ್ಟವನ್ನು ಯಾವತ್ತಿಗಾದರೂ ಕೇಳಿರಲು ಸಾಧ್ಯವೇ? ನೋ ಚಾನ್ಸ್. ನಮ್ಮ ಜೀವಲೋಕದಿಂದ ಕತ್ತೆಯಂತಹ ಶ್ರಮಿಕ ಪ್ರಾಣಿಯೊಂದನ್ನು ಕಳೆದುಕೊಳ್ಳುತ್ತಿದ್ದೇವೆನಿಸುತ್ತಿದೆ.

ಕತ್ತೆಗೊಂದು ಕಾಲ ಈಗಲಾದರೂ ಬರಲಿ... ‘ಕತ್ತೆಗಳು ಸಾರ್ ನಾವು ಕತ್ತೆಗಳು’ ಎಂದು ನಾವೆಲ್ಲ ಕತ್ತೆಗಳಾಗುವ ಬದಲು ಕತ್ತೆಗಳೆಂಬ ಶ್ರಮಜೀವಿ, ಕಾಯಕ ಪ್ರಿಯ ಪ್ರಾಣಿಯ ಸಂತತಿ ಸದ್ಗತಿ ಕಾಣದಂತೆ ನೋಡಿಕೊಳ್ಳೋಣವೇ? ಕತ್ತೆಗಳ ಬಗ್ಗೆ ಇಷ್ಟೆಲ್ಲ ಕಾಳಜಿ ಮತ್ತು ಪ್ರೀತಿ ಹುಟ್ಟಿಸಿದ ನಾಗಿಗೆ ಏನೆಂದು ಬಣ್ಣಿಸಲಿ? ■